**ಪಿ.ಡಬ್ಲ್ಯೂ ಃ 11**

**ಸಾಕ್ಷಿಯು ದೃಶ್ಯ ಮಾದ್ಯಮದ ಮೂಲಕ ಹಾಜರಾಗಿರುತ್ತಾರೆ.**

**ಸಾಕ್ಷಿಗೆ ದಿನಾಂಕಃ 22.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಅರೋಪಿ ಪರ ಶ್ರೀ ವಕೀಲರಿಂದಃ</u>**

ತನಿಖಾಧಿಕಾರಿಯು ಕಳುಹಿಸಿಕೊಟ್ಟ ಮೊಹರನಲ್ಲಿ ಯಾವ ಗುರುತು ಇತ್ತು ಎಂದು ನನ್ನ ವರದಿಯಲ್ಲಿ ನಮೂದು ಇರುವುದಿಲ್ಲ. ತನಿಖಾಧಿಕಾರಿಯು 7 ಲಕೋಟೆಗಳನ್ನು ಮೊಹರು ಮಾಡಿ ಕಳುಹಿಸಿಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಯು ಮೂಲ ಬಸ್ ಪಾಸ್ ನ್ನು ಪರಿಶೀಲನೆಗೆ ಕಳುಹಿಸಿಕೊಟ್ಟಿರಲಿಲ್ಲ. ಕ್ಯೂ ಡಿ 1 ರಿಂದ 3 ರಲ್ಲಿ ಇರುವ ಅಂಶಗಳನ್ನು ನೋಡಿ ನಾನು ಅವುಗಳನ್ನು ಬಸ್ ಪಾಸ್ ನ ನಕಲುಗಳು ಎಂದು ದೃಡೀಕರಿಸಿರುತ್ತೇನೆ. ತನಿಖಾಧಿಕಾರಿಯು ಮೂಲ ಬಸ್ ಪಾಸ್ ಇರುವುದಿಲ್ಲ ವೆಂದು ಅದ್ದ ರಿಂದ ನಕಲುಗಳನ್ನು ಕಳುಹಿಸಿರುತ್ತಿರುವುದಾಗಿ ಹೇಳಿರುತ್ತಾರೆ. ಕೆ ಎಸ್ ಅರ್ ಟಿ ಸಿ ಬಸ್ ಪಾಸ್ ನ ಮಾದರಿ ಪ್ರತಿಯನ್ನು ತನಿಖಾಧಿಕಾರಿಯು ನಮಗೆ ಕಳುಹಿಸಿರುವುದಿಲ್ಲ. ವೈಜ್ಞಾನಿಕ ಉಪಕರಣದ ಮೂಲಕ ಪರಿಶೀಲಿಸಿದಾಗ ಅದು ಅಳಿಸಿ ಹಾಕಿರುವ ಬರಹ ಲೋಕೇಶ್ ಎಂದು ಕಂಡು ಬಂದಿರುತ್ತದೆ. ಕ್ಯೂ ಡಿ 3ಎ ನ್ನು ಯಾರು ಬರೆದಿರುತ್ತಾರೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ತನಿಖಾಧಿಕಾರಿಯು ಕೇವಲ ಅಳಿಸಿ ಹಾಕಿರುವ ಬರಹದ ಬಗ್ಗೆ ಮಾಹಿತಿ ಕೇಳಿದ ಕಾರಣ ನಾನು ಅಷ್ಟು ಮಾಹಿತಿಯನ್ನು ಮಾತ್ರ ನೀಡಿರುತ್ತೇನೆ. ಅರ್ 1 ರಿಂದ 14 ಮತ್ತು ಕ್ಯೂ ಡಿ 1 ರಿಂದ 3 ರ ಇಂಕಿನ ಬರಹದ ವಯಸ್ಸನ್ನು ಕಂಡು ಹಿಡಿಯಲು ಉಪಕರಣ ಇರುವುದಿಲ್ಲ. ಅರ್ 1 ರಿಂದ 14 ಮತ್ತು ಕ್ಯೂ ಡಿ 1 ರಿಂದ 3 ರಲ್ಲಿ ಇರುವ ಇಂಕುಗಳ ಬಗ್ಗೆ ತನಿಖಾಧಿಕಾರಿಯು ಮನವಿ ಮಾಡದ ಕಾರಣ ಅದನ್ನು ಪರಿಶೀಲನೆ ಮಾಡಿರುವುದಿಲ್ಲ. ತನಿಖಾಧಿಕಾರಿಯು ಯಾವ ರೀತಿಯಲ್ಲಿ ಬಸ್ ಪಾಸಗಳ ನಕಲುಗಳನ್ನು ಕೊಟ್ಟಿರುತ್ತಾರೋ ಅದೇ ರೀತಿಯಲ್ಲಿ ನಾವು ಪರಿಶೀಲನೆ ಮಾಡಿರುತ್ತೇವೆ.

2) ತನಿಖಾಧಿಕಾರಿಯು ಎಷ್ಟು ಪಾಸಗಳನ್ನು ಲ್ಯಾಮಿನೇಷನ್ ಮಾಡಿ ಕಳುಹಿಸಿದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಎಫ್ ಎಸ್ ಎಲ್ ಬೆಂಗಳೂರು ಎಂದು ಮೊಹರು ಮಾಡಿ ನಮ್ಮ ವರದಿಯನ್ನು ತನಿಖಾಧಿಕಾರಿಗೆ ಕಳುಹಿಸಿಕೊಟ್ಟಿದ್ದೇವು. ಎಫ್ ಎಸ್ ಎಲ್ ಬೆಂಗಳೂರು ಎಂದು ಮೊಹರು ಮಾಡಿರುವ ಬಗ್ಗೆ ನನ್ನ ವರದಿಯಲ್ಲಿ ತಿಳಿಸಿರುತ್ತೇನೆ. ನಾನು ಪೋಲೀಸರ ಒತ್ತಡಕ್ಕೆ ಒಳಗಾಗಿ ಅವರಿಗೆ ಬೇಕಾದಾಗೇ ವರದಿಯನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ ಎಂ ಎಫ್ ಸಿ, ಮಳವಳ್ಳಿ.